**ಕರ್ನಾಟಕ ಸರ್ಕಾರ**
**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**
**ಸಿ.ಸಿ.ನಂ.351/2018**

**ಪಿ.ಡಬ್ಲ್ಯೂ: 01**
**ಸಿ.ಡಬ್ಲ್ಯೂ: 01**

| | | |
|---|---|---|
| ಸಾಕ್ಷಿದಾರರ ಹೆಸರು | : | ಉಮೇಶ |
| ತಂದೆಯ ಹೆಸರು | : | ಹನುಮಂತಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ತರೀಕೆರೆ |

**ದಿನಾಂಕ: 21-01-2020 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದ.**

ಮೃತ ಸೋಮಶೇಖರ ನನಗೆ ಅಣ್ಣನಾಗಬೇಕು. ದಿ:14-7-2017 ರಂದು ಮ: 1 ರಿಂದ 1-30 ರ ಸಮಯದಲ್ಲಿ ಕೋಡಿಹಳ್ಳಿಯಲ್ಲಿರುವ ತೋಟಕ್ಕೆ ಗೊಬ್ಬರ ಹಾಕಿಸಲು ಕೆಎ 18 ಎಂ 2383 ಕಾರಿನಲ್ಲಿ ಹೋಗಿ ನಂತರ ತರೀಕೆರೆ ಕಡೆಯಿಂದ ರಂಗೇನಹಳ್ಳಿ ಕಡೆಗೆ ಆಳುಗಳನ್ನು ಕರೆದುಕೊಂಡು ಹೋಗುವಾಗ ಜಂಬದಹಳ್ಳಿ ದೇವಸ್ಥಾನದ ಮುಂಭಾಗ ಲಕ್ಕವಳ್ಳಿ ಕಡೆಯಿಂದ ಮಹೀಂದ್ರಾ ಬುಲೆರೋ ಕಾರು ಅತೀವೇಗವಾಗಿ ಚಲಾಯಿಸಿಕೊಂಡು ಬಂದು ನನ್ನ ಅಣ್ಣ ಚಲಾಯಿಸುತ್ತಿದ್ದ ಕಾರಿಗೆ ಡಿಕ್ಕಿ ಮಾಡಿರುತ್ತಾನೆ. ನನ್ನ ಅಣ್ಣನಿಗೆ ತಲೆಗೆ, ಎದೆಗೆ, ಹೊಟ್ಟೆಗೆ ತೀವ್ರ ಸ್ವರೂಪದಪೆಟ್ಟು ಬಿದ್ದು, ಕೂಲಿ ಆಳುಗಳಿಗೆ ಸ್ವಲ್ಪ ಸಣ್ಣ ಪುಟ್ಟ ಪೆಟ್ಟಾಗಿರುತ್ತದೆ. ನಂತರ ತರೀಕೆರೆಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೆಚ್ಚಿನ ಚಿಕಿತ್ಸೆಗೆ ಶಿವಮೊಗ್ಗದ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಮಾರ್ಗ ಮಧ್ಯೆ ಮೃತಪಟ್ಟಿರುತ್ತಾರೆ. ಸ್ಥಳದಲ್ಲಿ ಅಪಘಾತವನ್ನು ನೋಡಿದವರು ಆರೋಪಿ ತಪ್ಪಿನಿಂದ ಅಪಘಾತವಾಗಿರುತ್ತದೆಂದು ತಿಳಿಸಿರುತ್ತಾರೆ. ಅದೇ ದಿನ ನಾನು ಪೋಲೀಸರಿಗೆ ದೂರು ನೀಡಿರುತ್ತೇನೆ. ದೂರನ್ನು ನಿಪಿ1 ಎಂದು ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯ್ತು. ಅಪಘಾತಕ್ಕೊಳಪಟ್ಟ ವಾಹನದ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು ಗುರುತಿಸಲಾಯ್ತು.

***ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.***

ನನಗೆ ದೂರವಾಣಿ ಕರೆ ಬಂದಿದ್ದಕ್ಕೆ ನಾನು ಸ್ದಳಕ್ಕೆ ಹೋಗಿರುತ್ತೇನೆ. ದೂರನ್ನು ನಾನೇ ಬರೆದಿರುತ್ತೇನೆ. ನಿಪಿ*1* ದೂರಿನಲ್ಲಿ ಏನು ಬರೆದಿದೆ ಎಂದು ಈಗ ಹೇಳಲಾಗುವುದಿಲ್ಲ ಎಂದರೆ ಸಾಕ್ಷಿಯು ಈಗ ನೆನಪಿಲ್ಲ ಎಂದು ನುಡಿಯುತ್ತಾರೆ. ಆರೋಪಿಯು ಅತೀವೇಗದಿಂದ ಕಾರನ್ನು ಚಲಾಯಿಸಿದ್ದನೆಂದು ನನಗೆ ಹೇಳಿರುವವರ ಹೆಸರು ವಿಳಾಸ ಹೇಳಲಾಗುವುದಿಲ್ಲ. ನನ್ನ ಅಣ್ಣ ಮೃತಪಟ್ಟಿದ್ದಕ್ಕಾಗಿ ಎಂವಿಸಿ ದಾವೆ ಹೂಡಿರುತ್ತೇವೆಂದರೆ ಸರಿ. ಅಪಘಾತವಾದ ಸ್ದಳವನ್ನು ನೋಡಿರುತ್ತೇನೆ. ಮೃತ ನನ್ನ ಅಣ್ಣನಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿರುವ ಹಾಗೆ ಮದ್ಯಪಾನ ಸೇವಿಸುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಅವರು ಸೇವಿಸುತ್ತಿರುವ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮೃತ ಅಣ್ಣನ ಅತೀವೇಗ ಹಾಗೂ ಅಜಾಗರೂಕತೆಯಿಂದ ಅಪಘಾತ ಸಂಬವಿಸಿರುತ್ತದೆಂದರೆ ಸರಿಯಲ್ಲ. ಪ್ರಕರಣದ ಬಗ್ಗೆ ನನಗೇನು ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

***ಮರುವಿಚಾರಣೆ:* ಇರುವುದಿಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)***

***ಓ. ಕೇ. ಸ. ಇ. ಎ. ಒ.***

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
***ಪ್ರ.ದ.ನ್ಯಾ.ದಂ.ರವರು,ತರೀಕೆರೆ.***